# ದಾಸರೆಂದರೆ ಪುರಂದರದಾಸರಯ್ಯ

ಸರಸ್ವತಿ ವಿಜಯನಾರಸಿಂಹ

*ಪುರಂದರದಾಸರ ಕೀರ್ತನೆಗಳನ್ನು ಹಾಡದ ಕನ್ನಡಿಗರೇ ಇಲ್ಲವೆಂದರೂ ಸರಿಯೇ. ಅಷ್ಟು ವ್ಯಾಪಕ ಪ್ರಭಾವ ಅವರ ಕೃತಿಗಳದ್ದು. ಪುರಂದರದಾಸರ ಒಂದು ಕಿರುಪರಿಚಯವನ್ನು ಮಾಡಿಕೊಟ್ಟಿರುವ ಶ್ರೀಮತಿ ಸರಸ್ವತಿ ಅವರು ಪ್ರಸಿದ್ಧ ಸಂಗೀತ ವಿದ್ವಾಂಸರಾದ ವಿಜಯನಾರಸಿಂಹ ಅವರ ಧರ್ಮಪತ್ನಿ.*

ಶಿಶುರ್ವೇತ್ತಿ ಪಶುರ್ವೇತ್ತಿ
ವೇತ್ತಿ ಗಾನರಸಂ ಫಣಿಃ ॥

ಎನ್ನುತ್ತಾರೆ. ಗಾನರಸವನ್ನು ಆಸ್ವಾದಿಸದ ಜೀವಿಯೇ ಇಲ್ಲ. ಪಶುಗಳೂ ಗಾನಕ್ಕೆ ಮರುಳಾಗುತ್ತವೆ. ತಾಯಾದವಳು ಜೋಗುಳ ಹಾಡಿಯೇ ತನ್ನ ಕಂದನಿಗೆ ನಿದ್ದೆ ತರಲೆತ್ನಿಸುತ್ತಾಳೆ. ಹಾವುಗಳು ಪುಂಗಿಯ ನಾದಕ್ಕೆ ಹೆಡೆ ಬಿಚ್ಚಿ ಕುಣಿಯುತ್ತವೆ. ಇಂಥ ದೇವಕಲೆ ಸಂಗೀತ. ಸಂಗೀತಕ್ಕೆ ಮಾನವ ತನ್ನನ್ನೇ ಸಮರ್ಪಿಸಿಕೊಂಡಿದ್ದಾನೆ. ಸಂಗೀತಕ್ಕಾಗಿ ರಾಜ್ಯಕೋಶಗಳನ್ನೂ ತೊರೆದು ಕಾಡುಮೇಡುಗಳಲ್ಲಿ ಅಲೆದು ರಾಗದೇವತೆಯನ್ನು ಒಲಿಸಿಕೊಂಡವರು ಎಷ್ಟೋ ಮಹಾನುಭಾವರು. ಸಂಗೀತ ಸಾಹಿತ್ಯಕ್ಷೇತ್ರಗಳೆರಡರಲ್ಲೂ ಅಪಾರ ಯಶಸ್ಸು ಪಡೆದು ತಮ್ಮ ಕೃತಿಗಳಿಂದ ವಿದ್ವಾಂಸರ ಮತ್ತು ಜನಸಾಮಾನ್ಯರ ಮನ ಸೂರೆಗೊಂಡ ಹರಿದಾಸ ಸಾಹಿತ್ಯ ಪರಂಪರೆಯ ದಾಸಶ್ರೇಷ್ಠರು ಪುರಂದರದಾಸರು. ಸಂಗೀತ ಕ್ಷೇತ್ರದಲ್ಲಿ ಇವರ ಸಾಧನೆ ಸಿದ್ಧಿಗಳು ಅಚ್ಚರಿಯೆ. ಇವರು “ಕರ್ಣಾಟಕ ಸಂಗೀತ ಪಿತಾಮಹ” ಎಂಬ ಬಿರುದಿಗೆ ಪಾತ್ರರಾದವರು.

ಪುರಂದರದಾಸರ ಜನ್ಮ ಪುಣೆಯ ಸಮೀಪದ ಪುರಂದರ ಘಡ ಎಂಬಲ್ಲಿ. ಇವರ ಪೂರ್ವಾಶ್ರಮದ ಹೆಸರು ಶ್ರೀನಿವಾಸ ನಾಯಕ. ಆಗರ್ಭ ಶ್ರೀಮಂತರಾಗಿದ್ದ ಇವರಿಗೆ ಧನಲಾಲಸೆಯೂ ಜಿಪುಣತನವೂ ಅಸದಳವಾಗಿತ್ತು. ಪತ್ನಿ ಸರಸ್ವತಿ ಬಾಯಿ ದೈವಭಕ್ತೆ. ಪತಿಯ ಜಿಪುಣತನದಿಂದ ನೊಂದ ಸಾಧ್ವಿ ಆಕೆ. ಒಮ್ಮೆ ಬಡ ಬ್ರಾಹ್ಮಣನೊಬ್ಬನು ಮಗನಿಗೆ ಉಪನಯನ ಮಾಡಬೇಕೆಂದು ನಾಯಕರಲ್ಲಿ ಸಹಾಯಾರ್ಥಿಯಾಗಿ ಬಂದ. ಜಿಪುಣ ನಾಯಕರು ಆತನನ್ನು ನಿರಾಶೆಗೊಳಿಸಿದರೂ ಮಾರುವೇಷದಲ್ಲಿ ಬಂದಿದ್ದ ಶ್ರೀಕೃಷ್ಣ ಆ ನಾಯಕರ ಪತ್ನಿಯಲ್ಲಿ ಸಹಾಯ ಬೇಡಿದ. ಇಲ್ಲವೆನ್ನಲಾಗದ ಆ ಸಾಧ್ವಿ ತನ್ನ ಮೂಗಿನ ಮೂಗುತಿಯನ್ನೆ ಕೊಟ್ಟು ಕಳಿಸಿದಳು. ಅದನ್ನು ಶ್ರೀನಿವಾಸನಾಯಕರಲ್ಲಿ ಅಡವಿಟ್ಟ ಬ್ರಾಹ್ಮಣ ಆತನ ಮನಃಪರಿವರ್ತನೆಗೆ ಕಾರಣನಾದ. ಪತಿಗೆ ಭಯಪಟ್ಟು ವಿಷ ಸೇವಿಸಲಿದ್ದ ಸರಸ್ವತಿಬಾಯಿಯ ವಿಷದ ಬಟ್ಟಲಿನಲ್ಲಿ ಕಂಡುಬಂದ ಮೂಗುತಿ ನಾಯಕರ ಮನಸ್ಸನ್ನು ಸಂಪೂರ್ಣವಾಗಿ ಬದಲಿಸಿತು.



*ಧಾರವಾಡದ ಕಲಾವಿದ ಶ್ರೀ ಯಶವಂತ ಶೆಟ್ಟಿಯವರು ಶಿಲೆಯಲ್ಲಿ ಕೆತ್ತಿದ ಶ್ರೀಪುರಂದರದಾಸರ ಪ್ರತಿಮೆ*

ಗಾನದೇವತೆಯ ಪ್ರತಿಮೂರ್ತಿ ನಾರದಮಹರ್ಷಿಗಳ ಅವತಾರಿ ಎನ್ನಲಾದ ಶ್ರೀನಿವಾಸ ನಾಯಕರು ತಮ್ಮ ಧನಲಾಲಸೆಯನ್ನು ತೊರೆಯಲು ಇದೊಂದು ಲೀಲಾನಾಟಕ ಮಾತ್ರ. ತಮ್ಮ ಸ್ವಸ್ವರೂಪವನ್ನು ಅರಿತುಕೊಳ್ಳಲು ನಾಯಕರು ಹೆಚ್ಚೇನೂ ಕಾಯಲಿಲ್ಲ. ಪತ್ನಿಯೊಂದಿಗೆ ಉಟ್ಟ ಬಟ್ಟೆಯಲ್ಲೇ ಸಕಲೈಶ್ವರ್ಯವನ್ನೂ ತೊರೆದು ನಾಯಕರು ಹಂಪಿಗೆ ಬಂದರು. ವಿಜಯನಗರ ಸಾಮ್ರಾಜ್ಯದ ರಾಜಗುರುಗಳಾಗಿದ್ದ ವ್ಯಾಸರಾಯರಲ್ಲಿ ಅವರು ತಮ್ಮ ಯೋಗ್ಯ ಗುರುವನ್ನು ಕಂಡರು. ವ್ಯಾಸರಾಯರೂ ಸಹ ಶ್ರೀನಿವಾಸನಾಯಕರನ್ನು ತಮ್ಮ ಶಿಷ್ಯರನ್ನಾಗಿ ಸ್ವೀಕರಿಸಿ ಹರಿದಾಸದೀಕ್ಷೆ ನೀಡಿದರು.

ಹೇರಳವಾಗಿ ದೇವರನಾಮಗಳನ್ನೂ ಸುಳಾದಿಗಳನ್ನೂ ಭಕ್ತಿ

ಪುರಸ್ಸರವಾಗಿ ರಚಿಸಿದ್ದ ವ್ಯಾಸರಾಯರು ಪುರಂದರದಾಸರಿಗೆ ಯೋಗ್ಯ ಮಾರ್ಗದರ್ಶಕರಾದರು. ಆ ಕಾಲದಲ್ಲಿ ಉದ್ಗ್ರಂಥಗಳನ್ನು ಸಂಸ್ಕೃತದಲ್ಲಿ ರಚಿಸಿ ವಿದ್ವನ್ಮಣಿಗಳೆಂದು ಖ್ಯಾತಿ ಪಡೆದಿದ್ದವರು ವಿದ್ಯಾಗರ್ವಿಗಳಾಗಿದ್ದರು. 'ವ್ಯಾಸಕೂಟ'ದವರೆಂಬ ಒಣಪ್ರತಿಷ್ಠೆಯನ್ನು ಬೆಳೆಸಿಕೊಂಡಿದ್ದ ಅಲ್ಲಿನ ವಿದ್ವಾಂಸರು ಯಾರನ್ನೂ ಪರಿಗಣಿಸುತ್ತಿರಲಿಲ್ಲ. ಆದರೆ ಪುರಂದರರು ವ್ಯಾಸರಾಯರಿಂದ ಪ್ರೇರೇಪಿಸಲ್ಪಟ್ಟು, 'ದಾಸಕೂಟ' ಪರಂಪರೆಯನ್ನು ಬೆಳೆಸಿದರು. ಅವರು ಗಹನ ತತ್ತ್ವಗಳನ್ನು ಜನಸಾಮಾನ್ಯರಿಗೆ ಸರಳವಾಗಿ ಕನ್ನಡದಲ್ಲೇ ತಿಳಿಸಿಹೇಳುವ ಕಾರ್ಯದಲ್ಲಿ ತೊಡಗಿದರು. ಈ ಪ್ರಯತ್ನದಲ್ಲಿ ಪುರಂದರರಿಗೆ ಅಪಾರ ಜನಮನ್ನಣೆ ದೊರೆಯಿತು. ತಿಳಿಗನ್ನಡದ ಈ ರಚನೆ ಆ ಕಾಲಕ್ಕೆ ತೀರ ಅಗತ್ಯವಾಗಿತ್ತು. 'ದಾಸಕೂಟ' 'ವ್ಯಾಸಕೂಟ'ವನ್ನು ಮೀರಿ ನಿಲ್ಲುವಂತಾಯಿತು.

ಪುರಂದರದಾಸರ ಅಸಂಖ್ಯ ಕೃತಿಗಳು ಜನಸಾಮಾನ್ಯರ ನಾಲಿಗೆಯ ಮೇಲೆ ನಲಿದಾಡತೊಡಗಿದವು. ಊಂಛ ವೃತ್ತಿಯನ್ನು ಕೈಗೊಂಡ ದಾಸರು ಸಮಾಜದ ಕುಂದುಕೊರತೆಯನ್ನು ದಿಟ್ಟವಾಗಿ ಎತ್ತಿ ಆಡತೊಡಗಿದರು. ಅನೀತಿ, ಅನಾಚಾರ, ಸುಳ್ಳು, ಕಪಟ, ಬೂಟಾಟಿಕೆಗಳನ್ನು ಕಟುವಾಗಿ ಟೀಕಿಸಿದರು. ಸದುದ್ದೇಶದಿಂದ ಸುಧಾರಣೆ ಕೈಗೊಂಡರು. ಜನರ ಆಡುಭಾಷೆಗೆ ಹೊಂದುವಂತೆ ವಾಕ್ಯರಚನೆ ಮತ್ತು ಪದಗಳನ್ನು ಮಾರ್ಪಡಿಸಿ ತಮ್ಮ ವಿಚಾರವನ್ನು ಜನರ ಮನದಲ್ಲಿ ನಾಟುವಂತೆ ಹೇಳುವಲ್ಲಿ ಹೊಸ ಶೈಲಿಯ ಪ್ರಯೋಗವನ್ನೇ ಮಾಡಿದರು. ಶಾಂತಿ, ಭಕ್ತಿ ಭಾವಗಳ ಹೊಳೆಯನ್ನೆ ಹರಿಸುವಲ್ಲಿ ದಾಸರು ಯಶಸ್ವಿಯಾದರು.

"ಪುರಂದರ ವಿಠಲ" ಎಂಬುದು ಇವರ ಅಂಕಿತ ನಾಮ. ಹಾಡಲೆಂದೇ ಸೃಷ್ಟಿಸಿದ ಈ ಕೀರ್ತನೆಗಳು ಜನರ ಮನಸ್ಸನ್ನು ಸೂರೆಗೊಂಡವು. ತಮ್ಮ ಜೀವನದ ದಿಕ್ಕನ್ನೇ ಬದಲಿಸಿ ಉನ್ನತ ಆದರ್ಶವನ್ನು ತಮಗೆ ತೋರಿದ ಪತ್ನಿಯನ್ನು ದಾಸರು ತಮ್ಮ ಕೃತಿಯೊಂದರಲ್ಲಿ ಹೊಗಳಿ ಕೃತಜ್ಞತೆ ಸಲ್ಲಿಸಿದ್ದಾರೆ. "*ಆದದ್ದೆಲ್ಲಾ ಒಳಿತೇ ಆಯಿತು*" ಎಂಬ ಕೃತಿಯಲ್ಲಿ "*ಹೆಂಡತಿ ಸಂತತಿ ಸಾವಿರವಾಗಲಿ*" ಎಂದು ಹರಸಿದ್ದಾರೆ. ಒಳಗೆ ಕಲ್ಮಷವನ್ನು ತುಂಬಿಕೊಂಡು ಹೊರಗೆ ಮಡಿ ಮಡಿ ಎಂದು ಹಾರುವ ಡಾಂಭಿಕರ ರೂಪಿಗೆ ಮರುಳಾಗಬಾರದು ಎಂಬುದನ್ನು ಚೆನ್ನಾಗಿ ಹೇಳಿದ್ದಾರೆ:

**ಗುಂಡು ತಂಬಿಗೆ ಹಿಡಿದು ಗೋಟಂಚು ಧೋತರಮಡಿಯನುಟ್ಟು ದಾಟು ಕಾಲಿಡುತ ಬರುವ ಗೊಡ್ಡು ವೈದಿಕರ ಬೂಟಕತನವನೀ ನೋಡಿ ಭ್ರಮಿಸಬೇಡಿ.**

"*ನಗೆಯು ಬರುತಿದೆ ಎನಗೆ ನಗೆಯು ಬರುತಿದೆ*" "*ಉದರ ವೈರಾಗ್ಯವಿದು*" "*ಹೊಲೆಯ ಹೊರಗಿಹನೆ ಊರೊಳಗಿಲ್ಲವೆ*" "*ತನುವ ನೀರೊಳಗದ್ದಿ ಫಲವೇನು*" "*ಬೇವು ಬೆಲ್ಲದೊಳಗಿದ್ದು ಫಲವೇನು*"—ಎಂಬ ವಿಡಂಬನಾತ್ಮಕ ಕೃತಿಗಳಿಂದ ಸಮಾಜಕ್ಕೆ ಕನ್ನಡಿ ಹಿಡಿದಿದ್ದಾರೆ. ಸಮಾಜವಿಮರ್ಶೆ, ಬೋಧನೆ, ಹರಿನಾಮ ಮಹಿಮೆ, ಅಂತರಂಗ ನಿವೇದನೆ, ಕೃಷ್ಣಭಕ್ತಿ, ಗುರುಸ್ತುತಿ—ಮೊದಲಾದ ಪ್ರಕಾರಗಳಲ್ಲೂ ದಾಸರ ಕೃತಿಗಳನ್ನು ವಿಭಾಗಿಸಬಹುದು.

ಶ್ರೀಕೃಷ್ಣನ ಲೀಲಾವಿಲಾಸಗಳನ್ನು ಬಣ್ಣಿಸುವಲ್ಲಿ ದಾಸರು ಸಿದ್ಧಹಸ್ತರು. "*ಕಲಿಯುಗದೊಳು ಹರಿನಾಮವ ನೆನೆದರೆ*" "*ಜಗದೋದ್ಧಾರನ ಆಡಿಸಿದಳೆಶೋದಾ*" "*ಯಾದವ ನೀ ಬಾ ... ಮಾಧವ ಮಧುಸೂದನ ಬಾರೋ*" "*ಕೃಷ್ಣಮೂರ್ತಿ ಕಣ್ಣಮುಂದೆ ನಿಂತಿದಂತಿದೆ*" "*ಆಡಿದನೋ ರಂಗ ಅದ್ಭುತ ಲೀಲೆಯ*" "*ಪೋಗದಿರೆಲೋ ರಂಗ ಬಾಗಿಲಿಂದಾಚೆಗೆ*" "*ಗೋಪಿಯ ಭಾಗ್ಯವಿದು*" "*ಬಂದದ್ದೆಲ್ಲಾ ಬರಲಿ ಗೋವಿಂದನ ದಯೆಯೊಂದಿರಲಿ*" "*ಹೂವ ತರುವರ ಮನೆಗೆ ಹುಲ್ಲ ತರುವ*" "*ಕಲ್ಲುಸಕ್ಕರೆ ಕೊಳ್ಳಿರೋ*" "*ರಾಮನಾಮ ಪಾಯಸಕೆ ಕೃಷ್ಣನಾಮ ಸಕ್ಕರೆ*"—ಈ ಕೀರ್ತನೆಗಳಲ್ಲಿ ಕೃಷ್ಣಭಕ್ತಿ ಸುಧೆ ಹೊನಲಾಗಿ ಹರಿಯುತ್ತದೆ. ಹಾಡುವವರ ಮೈ ಪುಲಕಗೊಂಡು ಭಕ್ತಿಭಾವದಲ್ಲಿ ಮುಳುಗಿಹೋಗುತ್ತದೆ.

"*ಈಸಬೇಕು ಇದ್ದು ಜೈಸಬೇಕು*" "*ಮಾನವ ಜನ್ಮ ದೊಡ್ಡದು ಇದ ಹಾನಿ ಮಾಡಿಕೊಳ್ಳಬೇಡಿ*" "*ಧರ್ಮವೇ ಜಯವೆಂಬ ದಿವ್ಯ ಮಂತ್ರ*" "*ಸ್ನಾನ ಮಾಡಿರೊ ಜ್ಞಾನತೀರ್ಥದಲಿ*" "*ಕಲ್ಲಾಗಿರಬೇಕು ಕಠಿಣ ಭವ ತೊರೆಯೊಳಗೆ*" "*ಎಚ್ಚರದಲಿ ನಡೆ ಮನವೆ*"— ಈ ಕೀರ್ತನೆಗಳಿಂದ ಜೀವನನಿಷ್ಠೆ, ಪ್ರಾಮಾಣಿಕತೆ ದೃಢಗೊಂಡು ಆತ್ಮಸ್ಥೈರ್ಯ ಹೃದಯದಲ್ಲಿ ನೆಲೆಗೊಳ್ಳುತ್ತದೆ.

"*ಅನುಭವದಡಿಗೆಯ ಮಾಡಿ*" "*ರಾಗಿ ತಂದೀರ್ಯಾ ಭಿಕ್ಷಕೆ ರಾಗಿ ತಂದೀರ್ಯಾ*" "*ಅವರೆಕಾಯಿ ಬೇಕು ಕಾಲದಲಿ ಅವರೇಕಾಯಬೇಕು*" —ಈ ಮುಂತಾದ ದೇವರನಾಮಗಳು ಪದಚಮತ್ಕಾರದ ಮೂಲಕ ಉತ್ತಮ ನೈತಿಕ ಮತ್ತು ಆಧ್ಯಾತ್ಮಿಕ ಬೋಧನೆಯನ್ನು ನೀಡುತ್ತವೆ. "*ನಾರಾಯಣ ನಿನ್ನ ನಾಮಸ್ಮರಣೆಯ ಸಾರಾಮೃತವೆನ್ನ ನಾಲಿಗೆಗೆ ಬರಲಿ*" "*ಕಂಪ ಕಂಪ ನೀ ಎನ್ನ ಕೈ ಬಿಡುವರೇ ರಂಗ*" "*ಕರುಣಾಕರ ನೀನೆಂಬುವುದೇತಕೊ*"—ಇವೇ ಮುಂತಾದ ಹಾಡುಗಳು ತೀವ್ರ ಭಗವದ್ವ್ಯಾಕುಲತೆಯನ್ನು ಪ್ರತಿಬಿಂಬಿಸುತ್ತವೆ.

"*ಗೋಪೀದೇವಿಯಂತೆ ಒರಳಿಗೆ ಕಟ್ಟಿದೆ ಬರಿದೆ ದೈನ್ಯಪಡುವೆ*", "*ಬೆಲ್ಲದ ಕಟ್ಟೆಯ ಕಟ್ಟಿ ಬೇವಿನ ಬೀಜ ಬಿತ್ತಿ ಜೇನಮಳೆಸುರಿದರೆ ವಿಷಹೋಗುವುದೇನಯ್ಯ*" "*ಜಗವ ಸುತ್ತಿಹುದೆಲ್ಲ ನಿನ್ನ ಮಾಯವಯ್ಯ*"—ಈ ಉಗಾಭೋಗಗಳು ಸರಳ ಸುಂದರವಾಗಿ ಭಾವಪೂರ್ಣವಾಗಿವೆ.

"*ಬದುಕಿದೆನು ಬದುಕಿದೆನು ಭವ ಎನಗೆ ಹಿಂಗಿತು*"

"*ಗೋವಿಂದ ಗೋವಿಂದ ಅತಿ ಆನಂದ*" "*ಭಾಗ್ಯದ ಲಕ್ಷ್ಮೀ ಬಾರಮ್ಮ*"—ಈ ಕೀರ್ತನೆಗಳು ಭಕ್ತನ ಹೃದಯದ ಸಂತೃಪ್ತಿಯನ್ನು ಪ್ರತಿನಿಧಿಸುತ್ತವೆ. ಭಕ್ತಿಭಾವವೊಂದೇ ಮಾನವ ಜನುಮದ ಉದ್ಧಾರಕ್ಕೆ ಕಾರಕವೆಂಬುದು ಈ ಕೀರ್ತನೆಗಳಲ್ಲಿ ಸ್ಪಷ್ಟವಾಗಿ ಹೇಳುತ್ತಿದೆ. ವ್ಯಾಸರಾಯರು ಪುರಂದರರ ಕೃತಿಗಳನ್ನು ಪುರಂದರೋಪನಿಷತ್ ಎಂದೂ ಕರೆದಿದ್ದಾರೆ.

ಪುರಂದರರು ಸಂಗೀತಾಭ್ಯಾಸಕ್ಕೊಂದೇ ಹೊಸ ಆಯಾಮವನ್ನು ಹಾಕಿಕೊಟ್ಟು, ಕಲಿಯಲು ವೈಜ್ಞಾನಿಕವೂ, ವ್ಯವಸ್ಥಿತವೂ ಆದ ಪದ್ಧತಿಯನ್ನು ರೂಪಿಸಿದರು. ಮಾಯಾಮಾಳವಗೌಳವನ್ನು ಶುದ್ಧಮೇಳವೆಂದು ಗ್ರಹಿಸಿ ಪಿಳ್ಳಾರಿ ಗೀತೆಗಳನ್ನು ರಚಿಸಿದರು. ಸುಳಾದಿ ಸಪ್ತತಾಳಗಳನ್ನು ಅಳವಡಿಸಿ, ಮಲಹರಿರಾಗವನ್ನು ಪ್ರಾರಂಭದ ಅಭ್ಯಾಸಕ್ಕೆ ಸುಲಭ ಸಾಧನವಾಗಿಸಿ, ಸಂಗೀತ ಇತಿಹಾಸದಲ್ಲೇ ದೊಡ್ಡ ಕ್ರಾಂತಿಯುಂಟುಮಾಡಿದರು. "*ಶ್ರೀಗಣನಾಥ ಸಿಂಧೂರ ವರ್ಣ,*" "*ಕುಂದಗೌರ ಗೌರೀವರ*" "*ಕೆರೆಯ ನೀರನು ಕೆರೆಗೆ ಚೆಲ್ಲಿ*"—ಈ ಗೀತೆಗಳು ಎಳೆಯರಿಗೆ ಸಂಗೀತಾಭ್ಯಾಸ ಮಾಡಿಸುವಲ್ಲಿ ಇಂದಿಗೂ ರೂಢಿಯಲ್ಲಿವೆ. ತುಂಬ ಜಟಿಲವಾದ ನೂರೆಂಟು ತಾಳಗಳಿಗೆ ಬದಲು ಏಳು ತಾಳಗಳನ್ನು ಮಾತ್ರ ಉಳಿಸಿ ಶಿಕ್ಷಣ ಪದ್ಧತಿಯನ್ನು ಸುಲಭಗೊಳಿಸಿದರು. ಮಾಯಾಮಾಳವಗೌಳವನ್ನೇ ಆಧಾರವಾಗಿಟ್ಟುಕೊಂಡು ಸರಳೆ, ಜಂಟಿವರಸೆ, ಅಲಂಕಾರ, ಗೀತೆಗಳು, ಸ್ವರಜತಿ, ವರ್ಣಗಳು, ಕೀರ್ತನೆಗಳೆಂಬ ಸೋಪಾನಗಳನ್ನು ರೂಪಿಸಿಕೊಟ್ಟು, ಸಂಗೀತಾಭ್ಯಾಸಿಗಳಿಗೆ ಸುಗಮವಾದ ಹಾದಿ ಕಲ್ಪಿಸಿಕೊಟ್ಟವರು ಪುರಂದರದಾಸರು. ಈ ಶಿಕ್ಷಣಪದ್ಧತಿಯೇ ಇಂದಿಗೂ ಪ್ರಚಲಿತವಾಗಿದೆ. "ಕರ್ಣಾಟಕ ಸಂಗೀತ ಪಿತಾಮಹ"ರೆಂದು ನಾರದಾಂಶ ಸಂಭೂತರಾದ ಪುರಂದರರನ್ನು ಹಾಡಿ ಹೊಗಳುವುದರಲ್ಲಿ ಅತಿಶಯೋಕ್ತಿಯೇನಿಲ್ಲ. ಪ್ರಾಸ, ಅನುಪ್ರಾಸ, ಯಮಕ, ಅಲಂಕಾರಗಳು, ದ್ವಿತೀಯಾಕ್ಷರ ಮತ್ತು ಅಂತ್ಯಪ್ರಾಸ, ಉಪಮಾನಗಳನ್ನೂ ಇವರ ಕೀರ್ತನೆಗಳಲ್ಲಿ ಕಾಣಬಹುದು.

ಪುರಂದರರು ನೃತ್ಯ ವಾದ್ಯದಲ್ಲೂ ಪರಿಣತರಾಗಿದ್ದರು. ಕರ್ಣಾಟಕ ಸಂಗೀತಕ್ಕೆ ಖಚಿತ ರೂಪವನ್ನು ದೊರಕಿಸಿಕೊಟ್ಟವರೇ ಪುರಂದರರು. ಮುಂದಿನ ವಾಗ್ಗೇಯಕಾರರಿಗೆ ಪುರಂದರರು ಮಾರ್ಗದರ್ಶಿಯಾದರು, ಗುರುಗಳಾದರು. ತ್ಯಾಗರಾಜ ಸ್ವಾಮಿಗಳು ಇವರನ್ನು ಗುರುಗಳೆಂದು ಅಂಗೀಕರಿಸಿದ್ದಾರೆ. ತಮ್ಮ ತಾಯಿಯವರಿಂದ ಪುರಂದರರ ಕೀರ್ತನೆಗಳನ್ನು ಕಲಿತುದಾಗಿ ಹೇಳಿದ್ದಾರೆ. "ಪ್ರಹ್ಲಾದ ಭಕ್ತ ವಿಜಯ"ದಲ್ಲಿ ಪುರಂದರರನ್ನು ಹೊಗಳಿ ಹಾಡಿ ಗೌರವ ಸೂಚಿಸಿದ್ದಾರೆ. ಪುರಂದರರು ತ್ಯಾಗರಾಜರಿಗಿಂತಲೂ ಇನ್ನೂರು ವರ್ಷ ಹಳಬರೆಂದು ತಿಳಿದುಬರುತ್ತದೆ. ೧೫೨೫ರಿಂದ ೧೫೬೫ರವರೆಗೂ ವಿಜಯನಗರದಲ್ಲಿದ್ದರೆಂದು ತಿಳಿದುಬರುತ್ತದೆ. ಕೃಷ್ಣದೇವರಾಯನ ಕಾಲಾನಂತರ ವಿಜಯನಗರ ಸಾಮ್ರಾಜ್ಯದ ಸ್ಥಿತಿಯನ್ನು ಕುರಿತು ಖಿನ್ನರಾಗಿ ಹಾಡಿದ್ದಾರೆ. "ಸತ್ಯವಂತರಿಗಿದು ಕಾಲವಲ್ಲ, ದುಷ್ಟಜನರಿಗಿದು ಸುಭಿಕ್ಷಕಾಲ" "ಎನ್ನ ಕುಲದವರಿಲ್ಲ, ಎನಗೊಬ್ಬರೂ ಹಿತವಿಲ್ಲ"—ಎಂಬ ಕೃತಿಗಳಿಂದ ವಿಜಯನಗರ ಸಾಮ್ರಾಜ್ಯದ ಅವನತಿಯನ್ನು ಕುರಿತು ಹೇಳಿದ್ದಾರೆ. ಅನಂತರ ಭಾರತದಲ್ಲೆಲ್ಲಾ ಸುತ್ತಿಬಂದ ಪುರಂದರದಾಸರು ೧೫೬೪ರಲ್ಲಿ ಕಾಲರಾದರೆಂದು ತಿಳಿದುಬರುತ್ತದೆ.

ಪುರಂದರದಾಸರನ್ನು ಸ್ಮರಿಸಿ ಅನೇಕ ಸಭೆ ಸಮಾರಂಭಗಳು ನಡೆಯುತ್ತಲೇ ಇರುತ್ತವೆ. ಪುರಂದರದಾಸರು ದಕ್ಷಿಣಾದಿ ಸಂಗೀತಕ್ಕೇ ಭದ್ರ ಬುನಾದಿ ಹಾಕಿದವರು. ಪುರಂದರರ ಪ್ರತಿಭೆಯನ್ನು ಎಷ್ಟು ಹೊಗಳಿದರೂ ಅದಕ್ಕೆ ಕೊನೆಯೇ ಇಲ್ಲ. ಈ ಸಂಗೀತಪಿತಾಮಹರು ಎಲ್ಲ ಸಂಗೀತಪ್ರೇಮಿಗಳ ಕೃತಜ್ಞತೆಗೆ ಪಾತ್ರರಾಗಿದ್ದಾರೆ.

❀

## *ಸಾಲ ಮಾಡಬೇಡ....*

ಶ್ರೀನಿವಾಸನಾಯಕರು ತಮ್ಮ ಸರ್ವಸ್ವವನ್ನೂ ತ್ಯಾಗ ಮಾಡಿ ಹರಿದಾಸರಾದ ವರ್ತಮಾನ ದೇಶದಲ್ಲೆಲ್ಲ ವ್ಯಾಪಿಸಿತು. ಪರಿಚಿತರೂ ಅಪರಿಚಿತರೂ ಕುತೂಹಲದಿಂದ ದಾಸರನ್ನು ನೋಡುವುದಕ್ಕೆ ಬರುತ್ತಿದ್ದರು. ಬಂದವರಿಗೆಲ್ಲ ದಾಸರ ಬಿಡಾರದಲ್ಲೇ ವಸತಿ ಭೋಜನಗಳಾಗುತ್ತಿದ್ದವು. ಆತಿಥಿ ಸತ್ಕಾರ ಮುಗಿದು, ಸರಸ್ವತೀಬಾಯಿಯ ಭೋಜನವೂ ಆದನಂತರ ಮಿಕ್ಕ ಪದಾರ್ಥಗಳನ್ನೆಲ್ಲ ಚಕ್ರತೀರ್ಥದಲ್ಲಿ ಜಲಚರಗಳಿಗೆ ಹಾಕಿಬಿಡುತ್ತಿದ್ದರು. ಅನಂತರ ದಾಸರ ಬಳಿಯಲ್ಲಿ ಒಂದು ಕಾಳು ಧಾನ್ಯವಾಗಲೀ, ಒಂದು ಕಾಸಾಗಲೀ ಇರುತ್ತಿರಲಿಲ್ಲ.

*ಸಾಲ ಮಾಡಬೇಡ, ಸಾಲದೆನಬೇಡ, ನಾಳೆಗಿಡಬೇಡ* ಎಂಬ ಮಾತುಗಳನ್ನು ಆ ಮಹಾನುಭಾವರು ಪತ್ನೀಪುತ್ರರಿಗೆ ಬೋಧಿಸುತ್ತಿದ್ದರು.

( *ಶ್ರೀ ಕರ್ಣಾಟಕ ಭಕ್ತವಿಜಯ* ದಿಂದ )

## ಆಶ್ರಮದ ಕಾರ್ಯಕ್ರಮಗಳು

### *ಸೆಪ್ಟೆಂಬರ್ 2003*

| | | |
|---|---|---|
| *ಏಕಾದಶಿ* | ಶನಿವಾರ | 6 |
| *ಸ್ವಾಮಿ ಅಭೇದಾನಂದ ಜಯಂತಿ* | ಶನಿವಾರ | 20 |
| *ಏಕಾದಶಿ* | ಸೋಮವಾರ | 22 |
| *ಸ್ವಾಮಿ ಅಖಂಡಾನಂದ ಜಯಂತಿ* | ಶುಕ್ರವಾರ | 26 |